# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1179 |
| ಉತ್ತರಿಸಬೇಕಾದ ದಿನಾಂಕ | 30.09.2020 |
| ಸದಸ್ಯರ ಹೆಸರು | ಶ್ರೀ ಪ್ರತಾಪ ಸಿಂಹ ನಾಯಕ್.ಕೆ |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಜನಸಾಮಾನ್ಯರಿಗೆ ಅಗತ್ಯವಿರುವ ಕಂದಾಯ ಇಲಾಖೆಯ ದಾಖಲೆಗಳನ್ನು ಪಡೆಯುವಲ್ಲಿ ಅನೇಕ ಸಮಸ್ಯೆಗಳಿರುವುದು ಸರ್ಕಾರದ ಗಮನದಲ್ಲಿದೆಯೇ; (ವಿಶೇಷವಾಗಿ ಆರ್.ಟಿ.ಸಿ) | ರಾಜ್ಯದಲ್ಲಿ ಜನಸಾಮಾನ್ಯರಿಗೆ ಅಗತ್ಯವಿರುವ ಕಂದಾಯ ಇಲಾಖೆಯ ದಾಖಲೆಗಳನ್ನು ಪಡೆಯುವಲ್ಲಿ ಯಾವುದೇ ಸಮಸ್ಯೆಗಳು ಇರುವುದಿಲ್ಲ. ರೈತರು ಹಾಗೂ ಸಾರ್ಜನಿಕರು ಪಹಣಿಗಳನ್ನು ತಹಶೀಲ್ದಾರ್ ಕಛೇರಿ ಮಾತ್ರವಲ್ಲದೇ, ಗ್ರಾಮ ಪಂಚಾಯಿತಿ ಮತ್ತು ನಾಡಕಛೇರಿಗಳಲ್ಲಿಯೂ ಸಹ ಪಡೆಯಬಹುದಾಗಿರುತ್ತದೆ. ಇದಲ್ಲದೆ, ಕಂಪ್ಯೂಟರ್ ಅಥವಾ ಸೈಬರ್‌ಕೆಫೆ ಮುಖಾಂತರ ಆನ್‌ಲೈನ್ ವಾಲೆಟ್ ಸೌಲಭ್ಯವನ್ನು ಬಳಸಿ ಕರ್ನಾಟಕದ ಯಾವುದೇ ಜಮೀನಿನ ಪಹಣಿಯನ್ನು ಪಡೆಯಲು i-RTC ವ್ಯವಸ್ಥೆಯು ಜಾರಿಯಲ್ಲಿರುತ್ತದೆ. |
| ಆ | ಕಂದಾಯ ಇಲಾಖೆಯು ಗ್ರಾಮ ಮಟ್ಟದಲ್ಲಿ ತಳಸ್ಪರ್ಶಿಯಾಗಿ ಕಂದಾಯದ ದಾಖಲೆಗಳನ್ನು ಸಿದ್ದಪಡಿಸಿ ನಾಗರೀಕರಿಗೆ ಕೂಡಲೇ ಲಭ್ಯವಾಗುವಂತೆ ಮಾಡಲು ಕೈಗೊಳ್ಳಲಿರುವ ಕ್ರಮವೇನು? (ವಿವರ ನೀಡುವುದು) | ಭೂಮಿ ತಂತ್ರಾಂಶದ ಮೂಲಕ i-RTC, i-MR, ಪೌತಿ ಖಾತೆ, ಹಕ್ಕು ಮತ್ತು ಋಣ ಕಾಲಂನಲ್ಲಿ ಪಹಣಿ ತಿದ್ದುಪಡಿ, ಪೋಡಿ ಇಂಡೀಕರಣ ಮತ್ತು ಭೂಪರಿವರ್ತನೆ ಸೌಲಭ್ಯಗಳಿಗೆ ಸಂಬಂಧಿಸಿದಂತೆ ನಾಗರೀಕರು ನೇರವಾಗಿ ಆನ್‌ಲೈನ್ ಮೂಲಕ ಮತ್ತು ಸಂಬಂಧಿಸಿದ ತಾಲ್ಲೂಕು ಕಛೇರಿಗಳಲ್ಲಿಯೂ ಸದರಿ ಸೌಲಭ್ಯಗಳನ್ನು ಪಡೆಯಬಹದಾಗಿದೆ. |
| ಇ | ಈ ಸಮಸ್ಯೆಗೆ ಕಾರಣಗಳೇನು? | ನೆಟ್‌ವರ್ಕ್ ಸಂಪರ್ಕ ವ್ಯತ್ಯಯ, ವಿದ್ಯುತ್ ಸಂಪರ್ಕ ಕಡಿತ ಅಥವಾ ಹಾರ್ಡ್‌ವೇರ್ ಉಪಕರಣಗಳ ತೊಂದರೆ ಇದ್ದಲ್ಲಿ ತಾತ್ಕಾಲಿಕ ಸಮಸ್ಯೆ ಉಂಟಾಗುತ್ತದೆ. ಈ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಲು ಪ್ರತಿ ಜಿಲ್ಲೆಗಳಲ್ಲೂ ತಾಂತ್ರಿಕ ಸಮಾಲೋಚಕರನ್ನು ನಿಯೋಜಿಸಲಾಗಿದೆ |

ಕಂಇ 119 ಎಂಆರ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು